# ಅಕ್ಕಿ ಸಂಗ್ರಹ 29 ಮಿ. ಟನ್

ಅಕ್ಟೋಬರ್ 2015ರಲ್ಲಿ ಆರಂಭಗೊಂಡ ವ್ಯವಹಾರ ವರ್ಷದಲ್ಲಿ ಇಲ್ಲಿ ವರೆಗೆ 29.05 ಮಿ. ಟನ್‌ಗಳಷ್ಟು ಅಕ್ಕಿ ಸಂಗ್ರಹಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಹಿಂದಿನ ವರ್ಷದಲ್ಲಿ 23.84 ಮಿ. ಟನ್‌ಗಳಷ್ಟು ಅಕ್ಕಿ ಎತ್ತುವರಿ ನಡೆಸಲಾಗಿತ್ತು. ಈ ವರ್ಷ ಶೇ 22ರಷ್ಟು ಅಧಿಕ ಸಂಗ್ರಹ ನಡೆಸಲಾಗಿದ್ದು, 30 ಮಿ. ಟನ್ ಸಂಗ್ರಹಿಸುವ ಗುರಿಯಿರುವುದಾಗಿ ಹೇಳಲಾಗಿದೆ.

ಪಂಜಾಬ್ ಮತ್ತು ಹರ್‍ಯಾಣದಲ್ಲಿ ಅಕ್ಕಿ ಸಂಗ್ರಹ ಕೆಲಸ ಪೂರ್ಣಗೊಂಡಿದ್ದು ತಲಾ 93.50 ಲಕ್ಷ ಟನ್ ಮತ್ತು 28.61 ಲಕ್ಷ ಟನ್ ಸಂಗ್ರಹಿಸಲಾಗಿದೆ. ಉತ್ತರ ಪ್ರದೇಶ, ಛತ್ತೀಸ್‌ಗಡ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಅಕ್ಕಿ ಎತ್ತುವರಿ ಕಾರ್ಯ ಭರದಿಂದ ಸಾಗುತ್ತಿದೆ ಎನ್ನಲಾಗಿದೆ. ಪಶ್ಚಿಮ ಬಂಗಾಳದಲ್ಲಿ 8.07 ಲ.ಟನ್‌ಗಳಷ್ಟು ಮಾತ್ರ ಸಂಗ್ರಹವಾಗಿದ್ದು ಶೇ 23 ರಷ್ಟು ಹಿನ್ನಡೆ ಉಂಟಾಗಿದೆ.